ದಿನಾಂಕಃ 17.04.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು : ಅರ್ಜಿದಾರರ ಪರ ವಕೀಲರಿಂದ :</u>**

ನಾನು 10ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ದಿನಾಂಕಃ 10.04.2018 ರಂದು ನಾನು ಸದರಿ ಲಾರಿಯನ್ನು ಖರೀದಿಸಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ನಾನು ಹೇಳಿರುವಂತೆ ವಾಹನವನ್ನು ಖರೀದಿ ಮಾಡದ ಕಾರಣ ಸದರಿ ಖರೀದಿಗೆ ಸಂಬಂಧಿಸಿದಂತೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಖರೀದಿಯಾಗಿದ್ದರೇ ಅಷ್ಟರಲ್ಲಾಗಲೇ ಆರ್.ಸಿ.ಯಲ್ಲಿ ನನ್ನ ಹೆಸರು ನಮೂದಾಗುತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಬ್ರೋಕರ್ ಮೂಲಕ ಲಾರಿ ಖರೀದಿಸಿದ್ದು, ಅವರು ಆರ್.ಸಿ.ಯಲ್ಲಿ ಹೆಸರನ್ನು ಬದಲಿಸುವಷ್ಟರಲ್ಲಿ ಅಪಘಾತವಾಗಿತ್ತು ಎನ್ನುತ್ತಾರೆ. ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಫಾರಂ ನಂ.29 ಮತ್ತು 30 ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

**2.** ಅಪಘಾತವಾದ ನಂತರ ಲಾರಿಯನ್ನು ನೀವು ಬಿಡುಗಡೆ ಮಾಡಿಸಿಕೊಂಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ವಾಹನವನ್ನು ನಾನು ಬಿಡುಗಡೆ ಮಾಡಿಸಿಕೊಂಡ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಲಾರಿಯನ್ನು ಮಾಲೀಕರಾದ ಬೋರೇಗೌಡರು ಇಂಡೆಮ್ನೆಟಿ ಬಾಂಡ್ ಕೊಟ್ಟು ಪೊಲೀಸರಿಂದ ಬಿಡುಗಡೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸುಳ್ಳು. ಸಾಕ್ಷಿಗೆ MVC No.707/2019 ರ ನಿಪಿ-21 ಮತ್ತು 22 ನ್ನು ತೋರಿಸಿ ಅದರ ಪ್ರಕಾರ ಬೋರೇಗೌಡರು ವಾಹನವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ-21 ನ್ನು ನೀವು ಓದಬಹುದೇ ಎಂದರೆ ಸಾಕ್ಷಿ ನನಗೆ ಅಷ್ಟಾಗಿ ಓದಲು ಬರುವುದಿಲ್ಲ ಎನ್ನುತ್ತಾರೆ. ನಿಪಿ-22 ರಲ್ಲಿ ಬೋರೇಗೌಡರ ಫೋಟೋ ಇರುತ್ತದೆ. ನಿಪಿ-22 ರಲ್ಲಿ ಸದರಿ ಟಿಪ್ಪರ್ ಲಾರಿ ಇರುತ್ತದೆ ಎಂದರೆ ಸಾಕ್ಷಿ ಅವರು ಯಾವಾಗ ಫೋಟೋ ತೆಗೆದಿರುತ್ತಾರೆಂದು ನನಗೆ ಗೊತ್ತಿಲ್ಲ

ಎನ್ನುತ್ತಾರೆ.

**3.** ನನ್ನ ತಾತ ಬೋರೇಗೌಡರಿಗೆ ಸಾಕಷ್ಟು ಆಸ್ತಿ ಇದ್ದು ಅವರು ಪರಿಹಾರ ಕೊಡುವುದನ್ನು ತಪ್ಪಿಸಲು ಹಾಗೂ ನನ್ನ ಮೇಲೆ ಜವಾಬ್ದಾರಿ ತೆಗೆದುಕೊಳ್ಳಲು ನಾನು 1ನೇ ಎದುರುದಾರರ ಜೊತೆ ಶಾಮೀಲಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸದರಿ ಲಾರಿ ಚಾಲನೆ ಮಾಡಲು ಚಾಲನಾ ಪರವಾನಗಿ ಇರಲಿಲ್ಲ. ನನಗೆ ಚಾಲನಾ ಪರವಾನಗಿ ಇಲ್ಲದ ಕಾರಣ ನಾನು ಅಡ್ಡಾದಿಡ್ಡಿಯಾಗಿ ವಾಹನ ಚಾಲನೆ ಮಾಡಿ ಅಪಘಾತ ಮಾಡಿರುತ್ತೇನೆಂದರೆ ಸುಳ್ಳು. ಆ ದಿನ ಲಾರಿಯಲ್ಲಿ 25 ಟನ್ ಎಂ.ಸ್ಯಾಂಡ್ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ನಾನು ದ್ವಿಚಕ್ರ ವಾಹನಕ್ಕೆ ಫುಟ್ ಬಾತ್‌ನಲ್ಲಿ ಡಿಕ್ಕಿಪಡಿಸಿರುತ್ತೇನೆಂದರೆ ಸಾಕ್ಷಿ ಅವರೇ ವಿರುದ್ಧ ದಿಕ್ಕಿನಲ್ಲಿ ಬಂದು ನನ್ನ ಲಾರಿಯ ಬಲಭಾಗಕ್ಕೆ ಡಿಕ್ಕಿಪಡಿಸಿರುತ್ತಾರೆ ಎನ್ನುತ್ತಾರೆ. ಸಾಧ್ಯವಾದರೇ ಪರಿಹಾರ ಕೊಡುವ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಉದ್ದೇಶಕ್ಕಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರಾಗಿಮುದ್ದನಹಳ್ಳಿಯಲ್ಲಿ 1 ಎಕರೆ ಜಮೀನಿಗೆ ಸುಮಾರು 40-50 ಲಕ್ಷ ಬೆಲೆ ಬಾಳುತ್ತದೆ ಎಂದರೆ ಗೊತ್ತಿಲ್ಲ. ನನ್ನ ತಾತ ಬೋರೇಗೌಡರಿಗೆ ರಸ್ತೆಯ ಪಕ್ಕದಲ್ಲಿಯೇ ಸದರಿ ಗ್ರಾಮದಲ್ಲಿ ಜಮೀನು ಇರುತ್ತದೆ ಎಂದರೆ ಸಾಕ್ಷಿ ನಾನು ನೋಡಿಲ್ಲ ಎನ್ನುತ್ತಾರೆ. ನನಗೆ ಎಲ್ಲಾ ಸಂಗತಿ ಗೊತ್ತಿದ್ದರೂ ಬುದ್ಧಿವಂತಿಕೆಯಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**